ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಆಎಂ/ಎನ3/ಪ್ರಾ.ವರ್ಗ/03/2020-21

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 012.
ದಿನಾಂಕ: 17-11-2020.

-: ಜ್ಞಾಪನ :-

**ವಿಷಯ:-** 2019-20ನೇ ಸಾಲಿನಲ್ಲಿ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆದ ಪ್ರಾಂಶುಪಾಲರ ವರ್ಗಾವಣೆ ಕುರಿತು.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಶಾಇ 1 ಶಾಸನ 2007 ದಿನಾಂಕ: 01.09.2007.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2007 ದಿನಾಂಕ: 23.04.2011.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29.11.2017.
4. ಈ ಕಚೇರಿ ಇದೇ ಸಮ ಸಂಖ್ಯೆಯ ಜ್ಞಾಪನ ದಿನಾಂಕ: 04.11.2020

* * * *

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ ಅಧಿನಿಯಮ ಮತ್ತು ನಿಯಮಗಳನ್ವಯ 2019-20ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರ ವರ್ಗಾವಣೆಯನ್ನು ಕೆ-ಸ್ವಾನ್ ಮೂಲಕ ಆನ್‌ಲೈನ್ ಕೌನ್ಸೆಲಿಂಗ್ ನಡೆಸಲಾಗಿದೆ. ಸದರಿ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಪ್ರಾಂಶುಪಾಲರಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ. ಪ್ರಾಂಶುಪಾಲರು ಸ್ಥಳ ಆಯ್ಕೆ ಮಾಡಿಕೊಂಡು ವರ್ಗಾವಣೆಗೊಂಡಿರುವ ವಿವರಗಳನ್ನು ಅನುಬಂಧ ದಲ್ಲಿ ನಮೂದಿಸಿದೆ. ವರ್ಗಾವಣೆಗೊಂಡ ಪ್ರಾಂಶುಪಾಲರಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿದೆ.

**ಷರತ್ತುಗಳು:-**

1. ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪಡೆದ ಪ್ರಾಂಶುಪಾಲರು ವರ್ಗಾವಣೆ ಆದೇಶ ಸ್ವೀಕರಿಸಿದ 07 ದಿನದೊಳಗಾಗಿ ಕಡ್ಡಾಯವಾಗಿ ಕರ್ತವ್ಯದಿಂದ ಬಿಡುಗಡೆ ಹೊಂದಿ ಮತ್ತು ಕರ್ತವ್ಯಕ್ಕೆ ಹಾಜರಾಗತಕ್ಕದ್ದು.
2. ಪ್ರಾಂಶುಪಾಲರ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ ಯಾವುದೇ ವರ್ಗಾವಣೆಯನ್ನು ಮಾರ್ಪಡಿಸಲು ಅವಕಾಶವಿರುವುದಿಲ್ಲ ಮತ್ತು ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.
3. ವರ್ಗಾವಣೆ ಆದೇಶ ಪಡೆದ ಪ್ರಾಂಶುಪಾಲರು ಸುಳ್ಳು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ವರ್ಗಾವಣೆ ಆದೇಶ ರದ್ದುಪಡಿಸಲಾಗುವುದು.
4. ಸದರಿ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ ಯಾವುದೇ ಮುಂಗಡ / ಪ್ರಯಾಣ ಭತ್ಯೆ ಹಾಗೂ ಸೇರುವ ಕಾಲಕ್ಕೆ ಅರ್ಹರಾಗಿರುವುದಿಲ್ಲ.
5. ಪ್ರಾಂಶುಪಾಲರು ಕರ್ತವ್ಯದಿಂದ ಬಿಡುಗಡೆ ಮಾಡಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿಯನ್ನು ಸಂಬಂಧಪಟ್ಟ ವರ್ಗಾವಣೆ ಆದೇಶದಲ್ಲಿನ ಕ್ರಮಸಂಖ್ಯೆಯೊಂದಿಗೆ "ಉಪ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು 560 012" ಈ ವಿಳಾಸಕ್ಕೆ ತಪ್ಪದೇ ನೊಂದಾಯಿತ ಅಂಚೆ ಮೂಲಕ ಒಂದು ವಾರದೊಳಗೆ ಕಳುಹಿಸುವುದು.
6. ದಂಪತಿ ಪ್ರಕರಣದಡಿ ವರ್ಗಾವಣೆ ಪಡೆದ ವಿವರ ಕುರಿತು ಸದರಿಯವರುಗಳ ಸೇವಾ ಪುಸ್ತಕದಲ್ಲಿ ಈ ನಿಯಮಗಳು ಜಾರಿಗೆ ಬಂದ ನಂತರ ಪ್ರಥಮ ಬಾರಿಗೆ ದಂಪತಿ ಪ್ರಕರಣದಡಿಯಲ್ಲಿ ವರ್ಗಾವಣೆ ಪಡೆದಿರುತ್ತಾರೆಂದು ಕಡ್ಡಾಯವಾಗಿ ನಮೂದಿಸತಕ್ಕದ್ದು.

Snehal

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ.
4. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಅಂತರ್ಜಾಲದ ಮುಖಾಂತರ.
5. ಕಚೇರಿ / ಹೆಚ್ಚುವರಿ ಪ್ರತಿ.